ತಾಂತ್ರಿಕತೆಗೆ ಸಂಬಂಧಿಸಿದ ವಿಷಯಗಳನ್ನು ಪದವಿಯಲ್ಲಿ ಓದಿದ್ದೆ. ಆದ್ದರಿಂದ ಮುಖ್ಯ ಪರೀಕ್ಷೆಯಲ್ಲಿ ಮಾನವಶಾಸ್ತ್ರ ಆಯ್ಕೆ ಮಾಡಿಕೊಂಡೆ. ಹೊಸ ವಿಷಯ ಆಯ್ದುಕೊಂಡಾಗ ಆಸಕ್ತಿ ಹೆಚ್ಚಾಗುತ್ತದೆ. ಪ್ರಾಥಮಿಕ ಪರೀಕ್ಷೆಗೂ ಮೊದಲೇ ಮುಖ್ಯ ಪರೀಕ್ಷೆಯ ವಿಷಯದ ಬಗ್ಗೆ ಒಂದು ಬಾರಿ ಓದಿಕೊಂಡಿರಬೇಕು.

◆ **ಮಾನವಶಾಸ್ತ್ರ ವಿಷಯದ ಆಯ್ಕೆಗೆ ಕಾರಣ ಏನು?**

ಮನೋವಿಜ್ಞಾನ, ಮಾನವಶಾಸ್ತ್ರದ ಬಗ್ಗೆ ತಿಳಿದುಕೊಳ್ಳಲು ಕುತೂಹಲವಿತ್ತು. ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ಈ ಎಲ್ಲವೂ ಮಾನವಶಾಸ್ತ್ರದಲ್ಲಿದೆ.

◆ **ಎಷ್ಟೇ ಓದಿದರೂ ನೆನಪಿನಲ್ಲಿ ಉಳಿಯುವುದಿಲ್ಲ ಎನ್ನುವ ದೂರು ಸಾಮಾನ್ಯವಾಗಿದೆಯಲ್ಲ?**

ನಮ್ಮವರ ದೊಡ್ಡ ಸಮಸ್ಯೆಯೆಂದರೆ ತಮ್ಮ ಸಾಮರ್ಥ್ಯಕ್ಕಿಂತ ಅವರು ಸಣ್ಣ ಗುರಿ ಇಟ್ಟುಕೊಂಡಿರುತ್ತಾರೆ. ಉತ್ತರ ಭಾರತದ ರಾಜ್ಯಗಳಲ್ಲಿ ಹಾಗಿಲ್ಲ. ಎಸ್ಎಸ್ಎಲ್‌ಸಿ, ಪಿಯುಸಿಯಲ್ಲಿ ಓದುವ ವಿದ್ಯಾರ್ಥಿಗಳಲ್ಲೂ 'ನಾವು ಕಷ್ಟಪಟ್ಟು ಓದಿದರೆ ಪರೀಕ್ಷೆಯಲ್ಲಿ ಪಾಸಾಗುತ್ತೇವೆ. ಯುಪಿಎಸ್‌ಸಿ ಪರೀಕ್ಷೆ ಕಷ್ಟವಲ್ಲ' ಎನ್ನುವ ಆತ್ಮವಿಶ್ವಾಸ ಇರುತ್ತದೆ. ಅದರಲ್ಲೂ, ಉತ್ತರ ಕರ್ನಾಟಕ ಭಾಗದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಆದ್ದರಿಂದ ಬಹಳಷ್ಟು ಜನ ಈ ಪರೀಕ್ಷೆಯ ಸನಿಹವೇ ಬರುವುದಿಲ್ಲ. ಓದಿನ ಬಗ್ಗೆ ಆಸಕ್ತಿ ಬೆಳೆಸಿಕೊಂಡರೆ ತಾನಾಗಿಯೇ ನೆನಪಿನಲ್ಲಿ ಉಳಿಯುತ್ತದೆ. ಹಳ್ಳಿಯಲ್ಲಿದ್ದುಕೊಂಡು ಓದುವವನಿಗೂ ಪರೀಕ್ಷೆ ಪಾಸ್ ಮಾಡಲು ಸಾಧ್ಯವಿದೆ.

◆ **ಅಂತರ್ಜಾಲದಲ್ಲಿ ಸಿಗುವ ಎಲ್ಲ ಮಾಹಿತಿಯನ್ನೂ ಓದಬೇಕೇ?**

ಸಿಕ್ಕ ಎಲ್ಲವನ್ನೂ ಓದುವುದು ಸರಿಯಲ್ಲ. ಪ್ರಚಲಿತ ವಿದ್ಯಮಾನಗಳ ಬಗ್ಗೆ ನಿರಂತರ ಅಭ್ಯಾಸ ಇರಬೇಕು. ತರಬೇತಿ ಅಕಾಡೆಮಿಗಳು ನೀಡುವ ಬೇಸಿಕ್ ವಿಷಯಗಳನ್ನು ತಿಳಿದುಕೊಂಡಿರಬೇಕು. ಬೇಕಿದ್ದು, ಬೇಡವಾಗಿದ್ದು ಎಲ್ಲವೂ ಅಂತರ್ಜಾಲದಲ್ಲಿ ಇರುತ್ತದೆ. ಅಭ್ಯಾಸ ಆರಂಭಿಸಿದ ಮೊದಲ ಒಂದು ವರ್ಷ ತುಂಬಾ ಎಚ್ಚರಿಕೆಯಿಂದ ಸರಕು ಆಯ್ಕೆ ಮಾಡಿಕೊಳ್ಳಬೇಕು. ಒಂದು ವರ್ಷದ ಬಳಿಕ ಯಾವುದನ್ನು ಓದಬೇಕು ಎನ್ನುವ ಸ್ಪಷ್ಟತೆ ಬರುತ್ತದೆ.

ಓದಲು ಬೇಸರವಾದರೆ ಆನ್‌ಲೈನ್‌ನಲ್ಲಿ ವಿಡಿಯೊ ಕೂಡ ಸಿಗುತ್ತವೆ. ಯುಪಿಎಸ್‌ಸಿ ಪರೀಕ್ಷೆ ಎದುರಿಸುವವರಿಗೆ ಕರ್ನಾಟಕ ಸರ್ಕಾರ ಮತ್ತು ಸಾಕಷ್ಟು ಖಾಸಗಿ ಸಂಸ್ಥೆಗಳು ಪ್ರೋತ್ಸಾಹ ವೇತನ ಕೊಡುತ್ತಿವೆ.

◆ **ಯುಪಿಎಸ್‌ಸಿ ಪರೀಕ್ಷೆ ಬರೆಯಲು ಪ್ರೇರಣೆಯಾದ ಅಂಶಗಳೇನು?**

ಖಾನಾಪುರದಲ್ಲಿ ಸರ್ವೋದಯ ಶಾಲೆ ಮತ್ತು ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಓದುವಾಗ ನಾನು ಕಂಡ ವಾತಾವರಣ ತುಂಬಾ ಸಹಕಾರಿಯಾಯಿತು. ಹಳ್ಳಿಗಳಲ್ಲಿ ಜನ ಅನುಭವಿಸುವ ಕಷ್ಟಗಳು, ಸರ್ಕಾರ ಸೌಲಭ್ಯ ಕೊಟ್ಟರೂ ಅದನ್ನು ಪಡೆದುಕೊಳ್ಳಲಾಗದ ಅಸಹಾಯಕತೆಯನ್ನು ನೋಡಿದ್ದೇನೆ. ಖಾನಾಪುರದಲ್ಲಿದ್ದಾಗ ಹಿಂದಿ, ಕೊಂಕಣಿ, ಮರಾಠಿ, ಉರ್ದು ಮಾತನಾಡುವ ಬಹುಸಂಸ್ಕೃತಿಯ ಜನರನ್ನು ನೋಡಿ ಪ್ರಭಾವಿತಗೊಂಡಿದ್ದೇನೆ. ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಕಲಿತ ಶಿಸ್ತು, ಪರೋಪಕಾರಿ ಮನೋಭಾವ, ಬಡವರಿಗೆ ಏನಾದರೂ ಮಾಡಬೇಕು ಎನ್ನುವ ತುಡಿತ ಪರೀಕ್ಷೆ ಎದುರಿಸಲು ಪ್ರೇರಣೆಯಾದವು.

## ಹಿಡಕಲ್ ಡ್ಯಾಂನಿಂದ ದೆಹಲಿವರೆಗೆ...

ಯುಪಿಎಸ್‌ಸಿ ಪರೀಕ್ಷೆಯಲ್ಲಿ 17ನೇ ರ್‍ಯಾಂಕ್ ಪಡೆದ ಹುಬ್ಬಳ್ಳಿಯ ರಾಹುಲ್ ಸಂಕನೂರ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂನಲ್ಲಿ ಬಾಲ್ಯ ಕಳೆದಿದ್ದಾರೆ. ಅಲ್ಲಿನ ಸೇಂಟ್ ಜರ್ಮನ್ಸ್ ಶಾಲೆಯಲ್ಲಿ 1ರಿಂದ 3ನೇ ತರಗತಿ ತನಕ ಓದಿದ್ದಾರೆ. ನಾಲ್ಕನೇ ತರಗತಿಯಿಂದ ಖಾನಾಪುರದ ಸರ್ವೋದಯ ವಿದ್ಯಾಲಯದಲ್ಲಿ, ನಂತರ 8ರಿಂದ 12ನೇ ತರಗತಿವರೆಗೆ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆ ಮತ್ತು ಬೆಂಗಳೂರಿನಲ್ಲಿ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದಿದ್ದಾರೆ. ರಾಹುಲ್ ಸಿಇಟಿಯಲ್ಲಿ 25ನೇ (ಮೆಡಿಕಲ್) ಮತ್ತು 30ನೇ (ಎಂಜಿನಿಯರಿಂಗ್) ರ್‍ಯಾಂಕ್ ಪಡೆದಿದ್ದರು.

ರಾಹುಲ್ 2014ರಲ್ಲಿ ಮೊದಲ ಬಾರಿಗೆ ಪರೀಕ್ಷೆ ಎದುರಿಸಿ ವೈಫಲ್ಯ ಕಂಡಿದ್ದರು. 2015 ಮತ್ತು 2016ರಲ್ಲಿ ಪ್ರಾಥಮಿಕ ಹಾಗೂ ಮುಖ್ಯ ಪರೀಕ್ಷೆಯಲ್ಲಿ ಪಾಸಾಗಿ ಸಂದರ್ಶನದಲ್ಲಿ ವಿಫಲರಾಗಿದ್ದರು. 2017ರ ಮುಖ್ಯ ಪರೀಕ್ಷೆ ಪಾಸಾಗಿರಲಿಲ್ಲ. 2018ರಲ್ಲಿ ಪರೀಕ್ಷೆ ಪಾಸು ಮಾಡಿದ್ದಾರೆ.

ರಾಹುಲ್ ತಂದೆ ಶರಣಪ್ಪ ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್. ತಾಯಿ ಸವಿತಾ ಸಂಕನೂರ ಗೃಹಿಣಿ.

◆ **ದಿನಕ್ಕೆ ಎಷ್ಟು ಗಂಟೆ ಓದಬೇಕು?**

ಯುಪಿಎಸ್‌ಸಿ ಪರೀಕ್ಷೆ ಎಂಬುದು ಒಂದೇ ದಿನ 100 ಮೀಟರ್ ಓಡಿ ಸುಮ್ಮನಾಗುವುದಲ್ಲ. ಅದು ಮ್ಯಾರಥಾನ್ ಇದ್ದಂತೆ, ಗುರಿ ಮುಟ್ಟುವ ತನಕ ನಿರಂತರವಾಗಿ ಓಡುತ್ತಲೇ ಇರಬೇಕು. ದಿನಕ್ಕೆ ಇಂತಿಷ್ಟೇ ಗಂಟೆ ಓದಬೇಕು ಎನ್ನುವ ಸಿದ್ಧಸೂತ್ರ ಸರಿಯಲ್ಲ. ದಿನಕ್ಕೆ ಕನಿಷ್ಠ 10–12 ಗಂಟೆ ಓದಲೇಬೇಕು. ಪ್ರತಿ ಎರಡು ಗಂಟೆಗೊಮ್ಮೆ ಹತ್ತು ನಿಮಿಷ ಬಿಡುವು, ಮಧ್ಯಾಹ್ನ ಕಿರು ನಿದ್ದೆ, ಗೆಳೆಯರ ಜೊತೆ ಹರಟೆ, ಸುತ್ತಾಟ ಎಲ್ಲವೂ ಇರಬೇಕು. ಗುರಿ (ಯುಪಿಎಸ್‌ಸಿ ಪರೀಕ್ಷೆ ಪಾಸು ಮಾಡುವ) ಮುಖ್ಯವಾಗಿಟ್ಟುಕೊಂಡೇ ಉಳಿದ ಕೆಲಸಗಳ ಯೋಜನೆ ರೂಪಿಸಬೇಕು.

◆ **ಮಾನಸಿಕವಾಗಿ ತಯಾರಿ ಹೇಗಿರಬೇಕು?**

ನಮ್ಮ ದೌರ್ಬಲ್ಯಗಳನ್ನು ಅರಿತುಕೊಂಡು ಅವುಗಳನ್ನು ಬೇಗನೆ ಸರಿಪಡಿಸಿಕೊಳ್ಳಲು ನಾವು ಮನಸ್ಸು ಮಾಡುವುದಿಲ್ಲ. ಮೊದಲ ಮೂರು ವರ್ಷ ನಾನು ಇದೇ ತಪ್ಪು ಮಾಡಿದೆ. ನನ್ನ ಕೈ ಬರಹ ಸುಂದರವಾಗಿಲ್ಲ, ವೇಗವಾಗಿಲ್ಲ ಎನ್ನುವುದು ಮನದಟ್ಟಾಯಿತು. ಆದ್ದರಿಂದ 27ನೇ ವಯಸ್ಸಿನಲ್ಲಿ ಇದರ ಬಗ್ಗೆ ತರಬೇತಿ ಪಡೆದುಕೊಂಡೆ, ಕೈಬರಹ ದುಂಡಾಗಿ ಬರೆಯಲು ಅಭ್ಯಾಸ ಮಾಡಿದೆ. ಇದು ಮನಸ್ಸಿನ ಶಕ್ತಿ ಹೆಚ್ಚಿಸಿತು.

ನಾನು ಐದನೇ ಪ್ರಯತ್ನದಲ್ಲಿ ಯಶಸ್ಸು ಕಂಡಿದ್ದೇನೆ. ವೈಫಲ್ಯ ಎದುರಾದಾಗಲೆಲ್ಲ ಮಾನಸಿಕವಾಗಿ ಒತ್ತಡಕ್ಕೆ ಒಳಗಾಗಿದ್ದೂ ಇದೆ. ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್ ಅವರ ಸಂಗೀತ, ಮಾರ್ಟಿನ್ ಲೂಥರ್ ಕಿಂಗ್, ಅಬ್ರಹಾಂ ಲಿಂಕನ್ ಅವರ ಭಾಷಣಗಳನ್ನು ಕೇಳುತ್ತಿದ್ದೆ. ಇದರಿಂದ ಏಳುಬೀಳುಗಳನ್ನು ಸಮರ್ಥವಾಗಿ ಎದುರಿಸಿ ಸ್ಥಿತಪ್ರಜ್ಞನಾಗಿರಲು ಸಾಧ್ಯವಾಗಿದೆ.

◆ **ಮಾಧ್ಯಮ (ಮೀಡಿಯಮ್) ಆಯ್ಕೆ ಹೇಗಿರಬೇಕು?**

ನಿಮಗೆ ಯಾವ ಭಾಷೆಯ ಮೇಲೆ ಹಿಡಿತ ಇದೆಯೋ ಅದರಲ್ಲೇ ಬರೆಯಿರಿ. ಕನ್ನಡದಲ್ಲಿ ಪರೀಕ್ಷೆ ಬರೆದರೂ ಯಶಸ್ಸು ಕಾಣಬಹುದು. ಕನ್ನಡದಲ್ಲಿಯೇ ಸಂದರ್ಶನ ನೀಡಬಹುದು.

◆ **ಇಂಗ್ಲಿಷ್ ಬರೊಲ್ಲ ಎನ್ನುವವರು ಏನು ಮಾಡಬೇಕು?**

ನಮಗೆ ಭಾಷೆಯ ಸಮಸ್ಯೆಗಿಂತ ಹೆಚ್ಚಾಗಿ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಜೀವನದ ಆಧಾರಕ್ಕೆ ಯಾವುದಾದರೂ ನೌಕರಿ ಸಿಕ್ಕರೆ ಸಾಕು ಎನ್ನುವ ಸಣ್ಣ ಗುರಿ ಇಟ್ಟುಕೊಂಡು ಬಿಡುತ್ತೇವೆ. 'Low Aim Is A Crime' ಎನ್ನುವ ಮಾತು ನೆನಪಿನಲ್ಲಿ ಇದ್ದರೆ ಸಾಕು.

◆ **ತರಬೇತಿ ಕೇಂದ್ರಗಳಿಗೆ ಹೋಗುವುದು ಅನಿವಾರ್ಯವಾ?**

ತರಬೇತಿ ಕೇಂದ್ರಗಳಲ್ಲಿ ಬೇಸಿಕ್ ತಂತ್ರಗಳನ್ನು ಹೇಳಿಕೊಡುತ್ತಾರೆ. ಯಾವ ಹಾದಿಯಲ್ಲಿ ಹೋಗಬೇಕು, ಹೇಗೆ ಓದಬೇಕು ಎನ್ನುವುದನ್ನು ತಿಳಿಸಿಕೊಡುತ್ತಾರೆ. ಮೊದಲ ಬಾರಿಗೆ ಪರೀಕ್ಷೆ ಎದುರಿಸುವವರು ತರಬೇತಿ ಕೇಂದ್ರಗಳ ಮಾರ್ಗದರ್ಶನ ಅಥವಾ ಹಿರಿಯರ ಸಲಹೆ ಪಡೆದುಕೊಳ್ಳಬೇಕು. ಅಂಗೈಯಲ್ಲಿಯೇ ಎಲ್ಲವೂ ಸಿಗುವುದರಿಂದ ತರಬೇತಿ ಕೇಂದ್ರಗಳಿಗೆ ಹೋಗುವುದು ಅನಿವಾರ್ಯವೇನಲ್ಲ. ಹೋದರೆ ಬೇಗನೆ ಗುರಿಯ ಹಾದಿ ಸ್ಪಷ್ಟವಾಗುತ್ತದೆ.

◆ **ಯಾವ ಕ್ಷೇತ್ರದಲ್ಲಿ ಕೆಲಸ ಮಾಡುವಾಸೆ ಇದೆ?**

ಎಲ್ಲರಿಗೂ ಉತ್ತಮ ಮತ್ತು ಉನ್ನತ ಶಿಕ್ಷಣ ಸಿಕ್ಕರೆ ಎಲ್ಲ ಸಮಸ್ಯೆಗಳು ಪರಿಹಾರವಾಗುತ್ತವೆ. ಪ್ರಾಥಮಿಕ, ಪ್ರೌಢಶಾಲೆ ಹಂತದಲ್ಲಿ ಸಿಗುವ ಶಿಕ್ಷಣವೇ ಭವಿಷ್ಯಕ್ಕೆ ಬುನಾದಿಯಾಗುತ್ತದೆ. ಆದ್ದರಿಂದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ಆಸೆಯಿದೆ. ■